ಈ ರೀತಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಮುಖ್ಯಪಟ್ಟಿಯಲ್ಲಿ ಕಂಡು ಬಂದ ಮೇಲ್ಕಂಡ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಹಾಗೂ ಮೇಲ್ಕಂಡ ಅಭ್ಯರ್ಥಿಯು ತಮ್ಮ ನೇಮಕಾತಿ ಹಕ್ಕನ್ನು ಕಳೆದುಕೊಂಡ ಕಾರಣ ಮೇಲ್ಕಂಡಂತೆ ಬೆಳಗಾವಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟು ಭರ್ತಿಯಾಗದೇ ಉಳಿದ ಪರಿಶಿಷ್ಟ ಪಂಗಡದ ಈ ಒಂದು ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳಲು ಉಲ್ಲೇಖ (5) ರಲ್ಲಿ ಪ್ರಕಟಿಸಿರುವ ತಿದ್ದುಪಡಿ ಬ್ಯಾಕ್‌ಲಾಗ್ ನಿಯಮಗಳನ್ವಯ ಉಲ್ಲೇಖ (9) ರನ್ವಯ ಪ್ರಕಟಿಸಿರುವ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಹೆಚ್ಚುವರಿ ಪಟ್ಟಿಯಲ್ಲಿ ಕಂಡು ಬಂದ ಪರಿಶಿಷ್ಟ ಪಂಗಡದ ಕೆಳಕಂಡ ಬ್ಯಾಕ್‌ಲಾಗ್ ಮಹಿಳಾ ಅಭ್ಯರ್ಥಿಯನ್ನು ಸದರಿ ಲಲಿತಮ್ಮ S.R, ಬಾಲಾಜಿನಗರ, ಶಿರಾ ಟೌನ್, ತುಮಕೂರು ಜಿಲ್ಲೆ (ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿ) ಇವರ ಬದಲಿಗೆ, Merit ಮತ್ತು ಮೀಸಲಾತಿಗೆ ಅನುಗುಣವಾಗಿ ಮೇಲ್ಕಂಡಂತೆ ಬೆಳಗಾವಿ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಈ ಒಂದು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಮಾಡುವ ಸಲುವಾಗಿ ಈ ಪ್ರಕರಣವನ್ನು ಪರಿಶೀಲಿಸಲಾಗಿ ಕೆಳಕಂಡ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರದ ಅಗತ್ಯವಿದ್ದುದರಿಂದ ಕೆಳಕಂಡ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಕಳುಹಿಸುವಂತೆ ಜಿಲ್ಲಾಧಿಕಾರಿ ಕೋಲಾರ ಜಿಲ್ಲೆ ಇವರಿಗೆ ದಿನಾಂಕ: 20.02.2007 ರಂದು ಉಲ್ಲೇಖ (13) ರನ್ವಯ ಪತ್ರ ಬರೆಯಲಾಯಿತು.

ತದನಂತರ ಕೋರಿದ ವರದಿಯು ಬರಲಿಲ್ಲವಾದ್ದರಿಂದ ದಿನಾಂಕ: 4.7.2007, 9.8.2007, 5.11.2007, 7.12.2007, 5.4.2008 ಹಾಗೂ 15.10.2008 ರಂದು ಜಿಲ್ಲಾಧಿಕಾರಿಗಳಿಗೆ ನೆನಪೋಲೆ ನೀಡಿ ಸದರಿ ಜಿಲ್ಲಾಧಿಕಾರಿಗಳಿಗೆ ಬರೆದ ಸದರಿ ಪತ್ರದ ಮತ್ತು ನೆನಪೋಲೆಗಳ ಪ್ರತಿಯನ್ನು ಕೆಳಕಂಡ ಅಭ್ಯರ್ಥಿಗೂ ಸಹ ಕಳುಹಿಸಿ, ತಮ್ಮ ಜಾತಿ ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಒದಗಿಸಬೇಕಾದ ಅಗತ್ಯ ದಾಖಲೆಗಳನ್ನು ಸದರಿ ಜಿಲ್ಲಾಧಿಕಾರಿಗಳಿಗೆ ಒದಗಿಸಿ, ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಈ ಕಛೇರಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಕೆಳಕಂಡ ಅಭ್ಯರ್ಥಿಗೆ ನಿರ್ದೇಶಿಸಲಾಯಿತು.

ಮೇಲ್ಕಂಡ ನಿರ್ದೇಶನಕ್ಕೆ ಉತ್ತರವಾಗಿ ಕೆಳಕಂಡ ಅಭ್ಯರ್ಥಿಯು ಉಲ್ಲೇಖ (14)ರನ್ವಯ ದಿನಾಂಕ: 13.01.2009 ರಂದು 20/–ರೂ.ಗಳ ಛಾಪಾಕಾಗದದಲ್ಲಿ ಬರೆದಿರುವ ಪ್ರಮಾಣ ಪತ್ರವೊಂದನ್ನು ಈ ಕಛೇರಿಗೆ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ತಾವು ಈಗಾಗಲೇ ಜಯದೇವ ಹೃದ್ರೋಗ ಸಂಸ್ಥೆ, East End, 9ನೇ ಬ್ಲಾಕ್, ಜಯನಗರ, ಬೆಂಗಳೂರು ಇಲ್ಲಿ ಕ್ಲರ್ಕ್ ಕಂ ಟೈಪಿಸ್ಟ್ ಆಗಿ ನೌಕರಿ ದೊರಕಿಸಿಕೊಂಡು ಸದರಿ ಸಂಸ್ಥೆಯಲ್ಲಿ ನಿರಂತರವಾಗಿ ಐದು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುತ್ತೇನೆಂದು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಬೆರಳಚ್ಚುಗಾರನೆಂದು ಆಯ್ಕೆಯಾಗಿರುವ ತಾನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬೆರಳಚ್ಚುಗಾರಳಾಗಿ ನೇಮಕಾತಿ ಹೊಂದಲು ತನಗೆ ಇಷ್ಟವಿರುವುದಿಲ್ಲವೆಂದು ಹಾಗೂ ಈ ಕಾರಣಗಳಿಂದ ತನ್ನ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನಿಮ್ಮ ಇಲಾಖೆಗೆ ಹಾಜರು ಪಡಿಸುವ ಅಗತ್ಯವಿರುವುದಿಲ್ಲವೆಂದು, ಆದ್ದರಿಂದ ಕಾನೂನು ರೀತ್ಯ ತನ್ನ ಬದಲಿಗೆ ಬೇರೊಬ್ಬ ಅರ್ಹ ಅಭ್ಯರ್ಥಿಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆ ಮಾಡಿಕೊಂಡು ನೇಮಕ ಮಾಡಿಕೊಳ್ಳುವಂತೆಯೂ ಹಾಗೂ ಇಂತಹ ಬೇರೊಬ್ಬ ಅಭ್ಯರ್ಥಿಯ ನೇಮಕಕ್ಕೆ ತನ್ನ ಯಾವುದೇ ತಕರಾರುಗಳು ಮತ್ತು ಅಭ್ಯಂತರಗಳೇನೂ ಇರುವುದಿಲ್ಲವೆಂದು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿನ ತನ್ನ ಆಯ್ಕೆಯನ್ನು ರದ್ದುಪಡಿಸಬೇಕೆಂದು ತನ್ನ ಸ್ವಇಚ್ಛೆಯಿಂದ ಉಲ್ಲೇಖ (14) ರನ್ವಯ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಹೆಸರು | SC/ST | ಮೀಸಲಾತಿ ವರ್ಗೀಕರಣ |
|---|---|---|---|
| 1. | ಕೆ.ಎಸ್. ಸುನೀತಾ,<br>D/o ಕೆ.ಎಸ್. ಸಂಜೀವರಾಯ, ತೊಂಡೆಬಾವಿ ರೈಲ್ವೆ ನಿಲ್ದಾಣ,<br>ತೊಂಡೆಬಾವಿ, ಗೌರಿಬಿದನೂರು ತಾಲ್ಲೂಕು,<br>ಕೋಲಾರ ಜಿಲ್ಲೆ–561213 | ST | ಪರಿಶಿಷ್ಟ ಪಂಗಡ<br>ಮಹಿಳಾ ಅಭ್ಯರ್ಥಿ<br>ಹೆಚ್ಚುವರಿ ಪಟ್ಟಿ |

ಮೇಲ್ಕಂಡ ಕಾರಣಗಳಿಂದ ಉಲ್ಲೇಖ (9)ರನ್ವಯ ದಿನಾಂಕ:19.11.2005 ರಂದು ಈ ಕಛೇರಿಯಿಂದ ಪ್ರಕಟಿಸಿರುವ ಈ ಇಲಾಖೆಯ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಬ್ಯಾಕ್‌ಲಾಗ್ ಹೆಚ್ಚುವರಿ ಪಟ್ಟಿಯಲ್ಲಿ ಮಹಿಳಾ ಅಭ್ಯರ್ಥಿಯಾಗಿ ಬೆರಳಚ್ಚುಗಾರರೆಂದು ಅಂತಿಮವಾಗಿ ಆಯ್ಕೆಯಾಗಿರುವ ಕೆಳಕಂಡ ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಯಾದ ಶ್ರೀಮತಿ ಕೆ.ಎಸ್. ಸುನೀತ, ತೊಂಡೆಬಾವಿ ರೈಲ್ವೆ ನಿಲ್ದಾಣ, ತೊಂಡೆಬಾವಿ, ಗೌರಿಬಿದನೂರು ತಾಲ್ಲೂಕ್ ಇವರ ಅಂತಿಮ ಬ್ಯಾಕ್‌ಲಾಗ್ ಆಯ್ಕೆಯನ್ನು ಸದರಿಯವರ ಕೋರಿಕೆಯಂತೆ ಅಂತಿಮ ಬ್ಯಾಕ್‌ಲಾಗ್ ಬೆರಳಚ್ಚುಗಾರರ ಹೆಚ್ಚುವರಿ ಪಟ್ಟಿಯಿಂದ ರದ್ದುಪಡಿಸುವುದು ಉಚಿತವೆಂದು ಮನಗಂಡು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: EST 1–274/2001–02, ದಿನಾಂಕ: 31ನೇ ಜನವರಿ 2009**

ಆದ್ದರಿಂದ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (9)ರನ್ವಯ ದಿನಾಂಕ: 19.11.2005 ರಂದು ಈ ಕಛೇರಿಯಿಂದ ಪ್ರಕಟಿಸಿರುವ ಈ ಇಲಾಖೆಯ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಅಂತಿಮ ಆಯ್ಕೆಯ ಬ್ಯಾಕ್‌ಲಾಗ್ ಹೆಚ್ಚುವರಿ ಪಟ್ಟಿಯಲ್ಲಿ ಮಹಿಳಾ ಅಭ್ಯರ್ಥಿಯಾಗಿ ಬೆರಳಚ್ಚುಗಾರರೆಂದು ಆಯ್ಕೆಯಾಗಿರುವ ಕೆಳಕಂಡ ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಯಾದ ಶ್ರೀಮತಿ ಕೆ.ಎಸ್. ಸುನೀತಾ D/o ಕೆ.ಎಸ್. ಸಂಜೀವರಾಯ, ತೊಂಡೆಬಾವಿ ರೈಲ್ವೆ ನಿಲ್ದಾಣ, ತೊಂಡೆಬಾವಿ ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ–561213 ಇವರ ಕೋರಿಕೆಯಂತೆ ಅಂತಿಮ ಬ್ಯಾಕ್‌ಲಾಗ್ ಬೆರಳಚ್ಚುಗಾರರ ಹೆಚ್ಚುವರಿ ಪಟ್ಟಿಯಿಂದ ಇವರ ಅಂತಿಮ ಬ್ಯಾಕ್‌ಲಾಗ್ ಆಯ್ಕೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಈ ಮೂಲಕ ರದ್ದುಪಡಿಸಲಾಗಿದೆ ಅಂದರೆ Cancel ಮಾಡಲಾಗಿದೆ.

ಕೆಳಕಂಡ ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಯಾದ ಶ್ರೀಮತಿ ಕೆ.ಎಸ್. ಸುನೀತಾ, ತೊಂಡೆಬಾವಿ ರೈಲ್ವೆ ನಿಲ್ದಾಣ, ತೊಂಡೆಬಾವಿ, ಗೌರಿಬಿದನೂರು ತಾಲ್ಲೂಕು ಇವರು ಇನ್ನು ಮುಂದೆ ಈ ಇಲಾಖೆಯ ಬೆರಳಚ್ಚುಗಾರರ ಹುದ್ದೆಯ ಮೇಲೆ ಯಾವುದೇ ರೀತಿಯ ನೇಮಕಾತಿ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದು ಮತ್ತು ಯಾವುದೇ ರೀತಿಯ ನೇಮಕಾತಿ ಹಕ್ಕನ್ನು ಸಹ ಸಾಧಿಸತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಜನ್ಮ ದಿನಾಂಕ | 21.9.2002ರ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ವ–ತಿಂ–ದಿ | ವಿದ್ಯಾರ್ಹತೆ ಮತ್ತು ಶೇಕಡಾವಾರು ಅಂಕಗಳು | ಷರಾ |
|---|---|---|---|---|---|
| 1 | ಕೆ.ಎಸ್. ಸುನೀತಾ, D/o ಕೆ.ಎಸ್. ಸಂಜೀವರಾಯ, ತೊಂಡೆಬಾವಿ ರೈಲ್ವೆ ನಿಲ್ದಾಣ, ತೊಂಡೆಬಾವಿ ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ–561213 | 8.5.1973 | 29.4.13 | i) S.S.L.C: 44..333<br>ii) ಕನ್ನಡ ಬೆರಳಚ್ಚು ಸೀನಿಯರ್:68.500<br>ಒಟ್ಟು:112.833<br>ಸರಾಸರಿ ಶೇಕಡಾವಾರು ಅಂಕಗಳು: 56.416 | ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಯಾಗಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಯ ಹೆಚ್ಚುವರಿ ಪಟ್ಟಿಯಲ್ಲಿನ ಇವರ ಅಂತಿಮ ಆಯ್ಕೆಯನ್ನು ಈ ಮೂಲಕ ರದ್ದುಪಡಿಸಿದೆ. |

ಆಯ್ಕೆ ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪಿ.ಆರ್. 131

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ, ರಾಷ್ಟ್ರೀಯ ಉದ್ಯಾನವನ, ಕಲ್ಕೆರೆ, ಬೆಂಗಳೂರು–83**

**ಅಲ್ಪಾವಧಿ ಟೆಂಡರು ಪ್ರಕಟಣೆ**

**ಸಂಖ್ಯೆ: ಎ1/ಬರಾಉ/ಸಿಆರ್–9/2008–09, ದಿನಾಂಕ: 7ನೇ ಫೆಬ್ರವರಿ 2009**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2008–09ನೇ ಸಾಲಿನಲ್ಲಿ ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ವಿವಿಧ ಕೆಲಸಗಳಿಗೆ, ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಇಚ್ಚೆವುಳ್ಳವರು ಮೊಹರು ಮಾಡಿದ ಟೆಂಡರ್ ಲಕೋಟೆಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ದಿನಾಂಕ:24.02.2009 ರಂದು ಮಧ್ಯಾಹ್ನ 3.00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ.

**ಷೆಡ್ಯೂಲ್**

| ಯೂನಿಟ್ ಸಂಖ್ಯೆ | ಕೆಲಸದ ವಿವರ | ಟೆಂಡರಿಗೆ ಇಡಲಾದ ಅಂದಾಜು ಮೊತ್ತ | ಟೆಂಡರಿಗೆ ನಿಗಧಿಪಡಿಸಿದ ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) |
|---|---|---|---|
| 1. | ಬನ್ನೇರುಘಟ್ಟ ವನ್ಯಜೀವಿ ವಲಯ ಕಛೇರಿ ಆವರಣದಲ್ಲಿ ಹಾಲಿ ಇರುವ ಸಿಬ್ಬಂದಿಯ ವಸತಿ ಜೋಡಿ ಗೃಹದ ಮೇಲೆ ಮೊದಲನೆ ಅಂತಸ್ತಿನಲ್ಲಿಉ ಒಂದು ವಸತಿ ಗೃಹ ಕಟ್ಟಡ ನಿರ್ಮಾಣ ಮಾಡುವುದು. | 7.20 ಲಕ್ಷ | 18000/– |

**ಷರತ್ತುಗಳು:**

1. ಟೆಂಡರು ಫಾರಂನ್ನು ಪ್ರತಿ ಫಾರಂಗೆ ರೂ. 100/– (ತೆರಿಗೆ ಪ್ರತ್ಯೇಕ) ರಂತೆ ಪಾವತಿ ಮಾಡಿ ದಿನಾಂಕ: 20.02.2009 ಮತ್ತು 21.02.2009 ರಂದು, ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
2. ಟೆಂಡರ್‌ನ ಷರತ್ತಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ,
ಬೆಂಗಳೂರು.

ಪಿ.ಆರ್. 164

**ಪೊಲೀಸ್ ಅಧೀಕ್ಷಕರವರ ಕಛೇರಿ ಉಡುಪಿ ಜಿಲ್ಲೆ, ಉಡುಪಿ**

**ಟೆಂಡರ್–ಕಂ–ಹರಾಜು ಅಧಿಸೂಚನೆ**

**ಸಂಖ್ಯೆ:ಎಸಿಟಿ–ಎ3/ನಿರುಪಯುಕ್ತ/165/2008–09, ದಿನಾಂಕ: 6ನೇ ಫೆಬ್ರವರಿ 2009**

**ವಿಷಯ:** ಉಡುಪಿ ಜಿಲ್ಲೆಯ ಪೊಲೀಸ್ ಇಲಾಖೆಯ ನಿರುಪಯುಕ್ತ ಹಳೆಯ ಟಯರ್ ಟ್ಯೂಬ್ & ಇತರೆ ಬಿಡಿಭಾಗಗಳನ್ನು ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

**ಉಲ್ಲೇಖ:** 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ/198/ಇಎಂವಿ/2000, ಬೆಂಗಳೂರು, ದಿನಾಂಕ: 19/06/2003.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಪೊಲೀಸ್ ಅಧೀಕ್ಷಕರು, ಉಡುಪಿ ರವರ ಕಚೇರಿಯ ಈ ಕೆಳಕಂಡ ನಿರುಪಯುಕ್ತ ಹಳೆಯ ಟಯರ್ ಟ್ಯೂಬ್ ಮತ್ತು ಇತರೆ ಬಿಡಿಭಾಗಗಳನ್ನು ದಿನಾಂಕ: 06.03.2009 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ, (ಪೊಲೀಸ್ ಮೋಟಾರ ವಾಹನ ವಿಭಾಗ) ಉಡುಪಿಯ ಆವರಣದಲ್ಲಿ ಟೆಂಡರ್–ಕಂ–ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು. ಸ್ವ–ಇಚ್ಛೆಯುಳ್ಳ ಸಾರ್ವಜನಿಕರು ಸದರಿ ಟೆಂಡರ್–ಕಂ–ಹರಾಜಿನಲ್ಲಿ ಭಾಗವಹಿಸಿ ನಿರುಪಯುಕ್ತಗೊಳಿಸಿದ ವಾಹನಗಳನ್ನು ಖರೀದಿಸಬಹುದಾಗಿರುತ್ತದೆ.

**ಹರಾಜು ಮಾಡಲು ಉದ್ದೇಶಿಸಿರುವ ನಿರುಪಯುಕ್ತ ವಾಹನಗಳ ವಿವರಗಳು**

| ಕ್ರ. ಸಂ. | ವಿವರಗಳು | 2007 ರಿಂದ 2008 | 2008 ಒಟ್ಟು |
|---|---|---|---|
| ಎ | ಟಯರ್ ಮತ್ತು ಟ್ಯೂಬ್‌ಗಳು | | |
| | 1. 215/75R15 | 5 | |
| | 2. 6.50*16 | 10 | |
| | 3. 3.00*18 | 1 | |
| | 4. 165/80R15 | 5 | |
| | 5. 185/85*16 | 5 | |
| | 6. 195R15 | 10 | |
| | 7. 6.00*16 | 10 | |
| | 8. 7.50*16 | 10 | |
| | 9. 195/70R14 | 5 | |
| | 10. 215R14 | 5 | |
| | **ಒಟ್ಟು** | | **66** |

| ಕ್ರ. ಸಂ. | ವಿವರಗಳು | 2007 ರಿಂದ 2008 | 2008 ಒಟ್ಟು |
|---|---|---|---|
| ಬಿ | ನಿರುಪಯುಕ್ತ ಕಬ್ಬಿಣದ ಹಳೆ ಬಿಡಿ ಭಾಗಗಳು | | 250 ಕೆಜಿ |
| ಸಿ | ಪ್ಲಾಸ್ಟಿಕ್, ಹಿತ್ತಾಳೆ, ಪೈಪ್ ಮತ್ತು ರಬ್ಬರ್ | | 350 ಕೆ.ಜಿ. |

ಮೇಲ್ಕಂಡ ನಿರುಪಯುಕ್ತ ಟಯರ್ ಟ್ಯೂಬ್‌ಗಳನ್ನು ಸಾರ್ವಜನಿಕರ ವೀಕ್ಷಣೆ/ಪರಿಶೀಲನೆಗಾಗಿ ಮೋಟಾರು ವಾಹನ ವಿಭಾಗ, ಡಿ.ಎ.ಆರ್. ಉಡುಪಿ ಕಛೇರಿ ಆವರಣದಲ್ಲಿ ನಿಲ್ಲಿಸಿದ್ದು ಸಾರ್ವಜನಿಕರು ಎಲ್ಲಾ ಕೆಲಸದ ದಿನಗಳ ಕಛೇರಿ ವೇಳೆಯಲ್ಲಿ ಪರೀಕ್ಷಿಸಬಹುದು.

ಟೆಂಡರ್ ಫಾರ್ಮಗಳನ್ನು ನಿಬಂಧನೆ ಮತ್ತು ಷರತ್ತುಗಳ ವಿವರಗಳನ್ನು ಜಿಲ್ಲಾ ಕಛೇರಿ, ಉಡುಪಿ / ಮೋಟಾರು ವಾಹನ ಅಧಿಕಾರಿ (ಎಂಟಿಒ) ಉಡುಪಿ ರವರಿಂದ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮಗಳನ್ನು ದಿನಾಂಕ: 01.03.2009 ರಂದು ಸಾಯಂಕಾಲ 05.00 ಗಂಟೆಯೊಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ..

ಟೆಂಡರ್–ಕಂ–ಬಹಿರಂಗ ಹರಾಜನ್ನು ಇದಕ್ಕೆ ಲಗತ್ತಿಸಿದ ನಿಬಂಧನೆ ಮತ್ತು ಷರತ್ತುಗೊಳಪಟ್ಟು ನಡೆಸಲಾಗುವುದು.

ಪೊಲೀಸ್ ಅಧೀಕ್ಷಕರು,
ಉಡುಪಿ ಜಿಲ್ಲೆ, ಉಡುಪಿ.

## ನಿಬಂಧನೆ ಮತ್ತು ಷರತ್ತುಗಳು

1. ಆರಕ್ಷಕ ಅಧೀಕ್ಷಕರು, ಉಡುಪಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಬಹಿರಂಗ ಹರಾಜನ್ನು ಮೋಟಾರು ವಾಹನಗಳು ಎಲ್ಲಿ ಹೇಗಿವೆಯೋ ಅದೇ ಪರಿಸ್ಥಿತಿಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಪೊಲೀಸ್ ಮೋಟಾರು ವಾಹನ ವಿಭಾಗ), ಉಡುಪಿ ಕಛೇರಿ ಆವರಣದಲ್ಲಿ ದಿನಾಂಕ: 06/03/2009 ರಂದು ಬೆಳಿಗ್ಗೆ 11.00 ನಡೆಸುವರು.
2. ಟೆಂಡರ್ ಫಾರಂಗಳನ್ನು ಪೂರ್ತಿ ಭರ್ತಿ ಮಾಡಿ ದ್ವಿಪ್ರತಿಯಲ್ಲಿ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಪೊಲೀಸ್ ಅಧೀಕ್ಷಕರು, ಉಡುಪಿ ರವರ ವಿಳಾಸಕ್ಕೆ ಕಳುಹಿಸಬೇಕು. ಮತ್ತು ಲಕೋಟೆಗಳ ಮೇಲೆ ನೀವು ಖರೀದಿಸಲು ಬಯಸಿದ ವಾಹನ ಸಂಖ್ಯೆ ಮತ್ತು ಮೋಟಾರು ವಾಹನಗಳನ್ನು ಖರೀದಿಸುವುದಕ್ಕಾಗಿ ಟೆಂಡರ್ ಫಾರಂ ಎಂದು ಸ್ಪಷ್ಟವಾಗಿ ನಮೂದಿಸಬೇಕು.
3. ಪ್ರತಿ ಟೆಂಡರ್ ಫಾರಂನೊಂದಿಗೆ ರೂ. 2000.00 (ರೂಪಾಯಿ ಎರಡು ಸಾವಿರಗಳು ಮಾತ್ರ) ಗಳ ಠೇವಣಿಯಾಗಿ ಪೊಲೀಸ್ ಅಧೀಕ್ಷಕರು, ಉಡುಪಿ ರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಬೇಕು. ಹಾಗೂ ಹರಾಜಿನಲ್ಲಿ ಭಾಗವಹಿಸುವ ಸಾರ್ವಜನಿಕರು ಹರಾಜಿಗೆ ಮುಂಚಿತವಾಗಿ ಸ್ಥಳದಲ್ಲಿಯೇ ಠೇವಣಿಯನ್ನು ನಗದಾಗಿ ಪಾವತಿಸಬೇಕು. ಠೇವಣಿಯಿಲ್ಲದ ಟೆಂಡರ್‌ಗಳನ್ನು ಮಾನ್ಯ ಮಾಡುವುದಿಲ್ಲ. ಮತ್ತು ಠೇವಣಿಗೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.
4. ಟೆಂಡರ್ ಫಾರಂಗಳಲ್ಲಿ ಮೊತ್ತಗಳನ್ನು ಬಿಡಿ ಅಕ್ಷರಗಳಲ್ಲಿ ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರ ಎರಡರಲ್ಲಿಯೂ ಬರೆಯಬೇಕು. ತಿದ್ದುಪಡಿ ಮಾಡಿದಲ್ಲಿ ಟೆಂಡರ್‌ದಾರರು ತಮ್ಮ ಪೂರ್ತಿ ಸಹಿಯೊಂದಿಗೆ ದೃಢೀಕರಿಸಬೇಕು.
5. ಪ್ರತಿಯೊಬ್ಬ ಟೆಂಡರ್‌ದಾರರು ಒಂದಕ್ಕಿಂತ ಹೆಚ್ಚಿನ ವಾಹನಗಳನ್ನು ಖರೀದಿಸಬಹುದು. ಮತ್ತು ಎಲ್ಲಾ ವಾಹನಗಳಿಗೆ ಒಂದೇ ಟೆಂಡರ್ ಫಾರಂಗಳನ್ನು ಉಪಯೋಗಿಸಬಹುದು. ಆದರೆ ಪ್ರತಿಯೊಂದು ವಾಹನಕ್ಕೆ ರೂ. 2000.00 ರಂತೆ ಠೇವಣಿ ಮೊತ್ತವನ್ನು ತುಂಬಬೇಕು. ಟೆಂಡರ್ ಫಾರಂಗಳನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲ.
6. ಪೂರ್ಣವಾಗಿ ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ: 01.03.2009 ರಂದು ಸಾಯಂಕಾಲ 05.00 ಗಂಟೆಯೊಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸಬೇಕು. ನಂತರ ಬಂದ ಟೆಂಡರ್ ಫಾರಂಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
7. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆ ದಾಖಲೆಗೊಳಿಸಿದ ನಂತರ ಸ್ವೀಕೃತವಾದ ಟೆಂಡರ್‌ಗಳನ್ನು ಪೊಲೀಸ್ ಅಧೀಕ್ಷಕರು, ಉಡುಪಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಸಾರ್ವಜನಿಕ ಸಮಕ್ಷಮದಲ್ಲಿ ತೆಗೆದು ಬಹಿರಂಗ ಪಡಿಸಿದ ನಂತರ ಈ ಎರಡರಲ್ಲಿ ಅತಿ ಹೆಚ್ಚಿನ ದರವನ್ನು ಯಾರು ನಮೂದಿಸಿರುವರೋ ಅವರು ಯಶಸ್ವಿ ಬಿಡ್‌ದಾರ / ಸವಾಲುದಾರರೆಂದು ಪರಿಗಣಿಸಲಾಗುವುದು.
8. ಹರಾಜಿನಲ್ಲಿ ಯಾವುದೇ ಟೆಂಡರ್ ಸವಾಲನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಮತ್ತು ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ರವರು ಹೊಂದಿರುತ್ತಾರೆ. ಮತ್ತು ಈ ವಾಹನಗಳ ಮಾರಾಟದ ಒಪ್ಪಂದದಲ್ಲಿ ಯಾವುದೇ ವಿವಾದ ಉಂಟಾದಲ್ಲಿ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಿರ್ಣಯವೇ ಅಂತಿಮವಾಗಿರುತ್ತದೆ.

9. ಯಶಸ್ವಿ ಟೆಂಡರ್‌ದಾರರು ನಿರುಪಯುಕ್ತ ವಾಹನಗಳ ಬಿಡ್ ಬೆಲೆಯ ಶೇಕಡಾ 25% ರಷ್ಟನ್ನು ಸ್ಥಳದಲ್ಲಿಯೇ ತುಂಬಬೇಕು. ಈ ಹಣಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಉಳಿದ ಹಣವನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರಿಗೆ ಹರಾಜಿಗೆ ಬಿಡ್ ಮೊತ್ತದ ಬಗ್ಗೆ ಒಪ್ಪಿಗೆ ಪಡೆದ ನಂತರ ಪಾವತಿಸಬೇಕು. ಬಾಕಿ ಹಣ ಪಾವತಿಸಿದ ನಂತರವೇ ವಾಹನಗಳನ್ನು ನೀಡಲಾಗುವುದು. ಯಶಸ್ವಿ ಬಿಡ್‌ದಾರರು ಬಾಕಿ ಹಣ ಪಾವತಿ ಮಾಡುವುದಲ್ಲದೇ ಚಾಲ್ತಿಯಲ್ಲಿರುವ ಸೇಲ್ಸ್ ಟ್ಯಾಕ್ಸ್‌ನ್ನು ತುಂಬಿ ವಾಹನವನ್ನು ಏಳು ದಿನಗಳೊಳಗಾಗಿ ತಮ್ಮ ಸ್ವಂತ ಖರ್ಚಿನಿಂದ ತೆಗೆದುಕೊಂಡು ಹೋಗಬೇಕು. ತಪ್ಪಿದಲ್ಲಿ ಅವರು ಈಗಾಗಲೇ ತುಂಬಲಾದ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಹೊಸ ಅಧಿಸೂಚನೆಯನ್ನು ಹೊರಡಿಸಿ ಮರು ಹರಾಜು ಹಾಕಲಾಗುವುದು. ಮತ್ತು ಮರು ಹರಾಜಿನಲ್ಲಿ ಸರ್ಕಾರಕ್ಕೆನಾದರೂ ನಷ್ಟವಾದಲ್ಲಿ ಅಂದರೆ ಮೊದಲಿನ ಹರಾಜಿನ ಬೆಲೆಗಿಂತ ಕಡಿಮೆ ಆದಲ್ಲಿ ಆ ನಷ್ಟವನ್ನು ಅವರಿಂದಲೇ ವಸೂಲಿ ಮಾಡಲಾಗುವುದು.
10. ಯಶಸ್ವಿ ಬಿಡ್‌ದಾರರು ಎಲ್ಲಾ ಹಣವನ್ನು ಪೊಲೀಸ್ ಅಧೀಕ್ಷಕರು, ಉಡುಪಿ ರವರ ಕಛೇರಿ ನಗದು ಶಾಖೆಯಲ್ಲಿ ನಗದು ರೂಪದಲ್ಲಿ ತುಂಬಬೇಕು. ಚೆಕ್ ಅಥವಾ ಡಿ.ಡಿ. ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.
11. ಹರಾಜು ಮುಗಿದ ನಂತರ ಯಶಸ್ವಿಯಾಗದ ಟೆಂಡರ್ / ಬಿಡ್‌ದಾರರಿಗೆ ಠೇವಣಿ ಹಣವನ್ನು ಕೂಡಲೇ ಹಿಂದಿರುಗಿಸಲಾಗುವುದು.
12. ಹರಾಜಿನಲ್ಲಿ ಭಾಗವಹಿಸುವ ಎಲ್ಲಾ ಟೆಂಡರ್ / ಬಿಡ್‌ದಾರರು ಇಲಾಖಾ/ ಸರ್ಕಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
13. ಒಮ್ಮೆ ಟೆಂಡರ್ / ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ತಮ್ಮ ವಾಹನವನ್ನು ಒಯ್ಯುವಾಗ ಯಾವುದಾದರೂ ತಕರಾರು, ವಾದ ವಿವಾದ ಮಾಡಿದಲ್ಲಿ ಅಂಥವರು ಮುಂಗಡವಾಗಿ ಪಾವತಿಸಿದ ಠೇವಣಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಪೊಲೀಸ್ ಅಧೀಕ್ಷಕರು,
ಉಡುಪಿ ಜಿಲ್ಲೆ, ಉಡುಪಿ

ಪಿ.ಆರ್. 153

**THE KARNATAKA STATE BOARD OF WAKFS**

**[Constituted by the Government of Karnataka under the Wakf Act, 1995 (CENTRAL ACT-43 OF 95)]**

**Darul Awkaf, # 6, Cunningham Road, Bangalore-560 052**

**website:www.karwakf.org** **e-mail-info@karwakf.org**

**CERTIFICATE OF REGISTRATION**

**No. KBW/REG/11/GBA/08-09, Dated: 3rd November 2008**

It is hereby certified that the Wakf described hereunder is registered and brought on to the Register of Wakfs in accordance with Section 36 of the Wakf Act. 1995

| Sl. No.of Kitabul Awkaf | Name, Class of Description of the Wakfs | Particulars of Wakf properties | Name of the Muthawalli |
|---|---|---|---|
| 125 | Dargah Hazrath Syedna Shaik Sadd Maqdoom Peer Zanjani and Masjid-e-Zanjaniya (Sunni) Near Old – Idgah-e-Bahmaniya, Aland Road, Gulbarga District. | Property No. 4/1A measuring 8A-9 G & 4/1 Aa, measuring 4 A -00G<br>Total-12 A – 09 G<br>Situated at Malewadi Taluk & District Gulbarga<br>**Boundaries:**<br>North: Old Muslim Grave Yard & Open land<br>South: Old Muslim Graves<br>East : Old Muslim Graves<br>West: Old Muslim Graves & Open land. | Represented by Mr. Shah Mohammed Shujauddin Zanjani, Muthawalli |

This certificate is issued as per the powers delegated in order No.KBW/11/ADM/05-06 Dated: 2.3.2006 of the Karnataka State Board of Wakfs.

Addl. Chief Executive Officer,
Karnataka State Board of Wakfs.

P.D. 27

**ಜಲಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ ಇಲಾಖೆ**

**ಕಾರ್ಯಪಾಲಕ ಅಭಿಯಂತರು ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು.**

**ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪದ್ದತಿ ಕೆ.ಡಬ್ಲ್ಯೂ–1 (20 ಲಕ್ಷಗಳ ವರಗೆ)**

**(ಐಟಂವಾರು ಟೆಂಡರ್)**

**ಅಲ್ಪಾವಧಿ ಪ್ರಕಟಣೆ ಸಂಖ್ಯೆ :14/2008–09, ದಿನಾಂಕ: 31ನೇ ಜನವರಿ 2009**

4702 (ಯೋಜನೆ) ಲೆಕ್ಕ ಶೀರ್ಷಿಕೆಯಡಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಲೋಕೋಪಯೋಗಿ/ಜಲಸಂಪನ್ಮೂಲ/ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ–2000ರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಂದ ದ್ವಿಪ್ರತಿಗಳಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿ ಮೊಹರು ಮಾಡಿದ ಟೆಂಡರ್‌ಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನಿಗದಿಪಡಿಸಿದ ದಿನಾಂಕದಂದು 16.00 ಗಂಟೆಯವರೆಗೆ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಅದೇ ದಿನ 16.30 ಗಂಟೆಗೆ ಹಾಜರಿರುವ ಗುತ್ತಿಗೆದಾರರ/ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಟೆಂಡರನ್ನು ತೆರೆಯಲಾಗುವುದು.

ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1)ನೇ ಐ.ಟಿ.ಟಿ ನಿಬಂಧನೆ 2 ಮತ್ತು 3ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಅಂದಾಜು ಪರಿಮಾಣ, ಗಣಿ ನಕ್ಷೆ, ರೇಖಾ ಚಿತ್ರಗಳು ಮತ್ತು ಇತರೆ ವಿವರಗಳನ್ನು ಒಳಗೊಂಡ ಯೋಜನಾ ವರದಿ, ಕರಾರು ಷರತ್ತುಗಳನ್ನು ಒಳಗೊಂಡ ದಾಖಲಾತಿಗಳನ್ನು ಎಲ್ಲಾ ಸರ್ಕಾರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಈ ಕಛೇರಿಯಲ್ಲಿ ವೀಕ್ಷಿಸಬಹುದಾಗಿದೆ. ಗುತ್ತಿಗೆದಾರರು ಖಾಲಿ ಟೆಂಡರ್ ದಾಸ್ತಾವೇಜುಗಳನ್ನು ಮೂಲ ನೋಂದಣಿ ಪುಸ್ತಕವನ್ನು ಹಾಜರುಪಡಿಸಿ ಮತ್ತು ನಿಗಧಿಪಡಿಸಿದ ಟೆಂಡರ್ ದಾಖಲೆ ಪತ್ರಗಳ ಬೆಲೆಯನ್ನು ಡಿ.ಡಿ. ಅಥವಾ ಪೇ ಆರ್ಡರ್ ಮೂಲಕ ಯಾವುದಾದರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಂಗಳೂರಿನಲ್ಲಿ ಪಾವತಿಸುವಂತೆ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸುವ ವ ಮೂಲಕ ಪ್ರಕಟಣೆಯಲ್ಲಿ ನಿಗಧಿಪಡಿಸಿದ ದಿನಾಂಕಗಳಂದು ಪಡೆಯಬಹುದಾಗಿದೆ.

**ಷರತ್ತುಗಳು:**

1. ಅಪೇಕ್ಷಿತ ಗುತ್ತಿಗೆದಾರರು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1) ರಲ್ಲಿ ನಿಗಧಿಪಡಿಸಿರುವ ವಿವರವಾದ ಸೂಚನೆಗಳು ಮತ್ತು ಷರತ್ತುಗಳು, ಗುತ್ತಿಗೆದಾರರ ಅರ್ಹತೆ, ಮುಂಗಡ ಠೇವಣಿ ಮೊತ್ತ, ಅದರ ಅವಧಿ, ಹಾಗೂ ಯಾವ ತರಹ ನೀಡಬೇಕೆಂಬುದರ ಬಗ್ಗೆ, ಗುತ್ತಿಗೆದಾರರು ದಾಖಲುಗಳನ್ನು ತುಂಬುವ ರೀತಿ ಹಾಗೂ ಪಾಲಿಸಬೇಕಾದ ನಿಯಮಗಳು, ನಿಗಧಿತ ಸಮಯ, ಗುತ್ತಿಗೆಯನ್ನು ಸ್ವೀಕರಿಸುವ ಹಾಗೂ ತೆರೆಯಲು ನಿಗಧಿಪಡಿಸಿರುವ ದಿನಾಂಕ ಹಾಗೂ ಗುತ್ತಿಗೆಯಲ್ಲಿರಬಹುದಾದ ತಪ್ಪುಗಳು ಹಾಗೂ ಅವುಗಳನ್ನು ಸರಿಪಡಿಸುವ ಬಗ್ಗೆ, ಭದ್ರತಾ ಠೇವಣಿ ಹಾಗೂ ವ್ಯತ್ಯಾಸದ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚುವರಿ ಭದ್ರತಾ ಠೇವಣಿ ಇಡುವ ಬಗ್ಗೆ ಹಾಗೂ ಇತರೆ ಹೆಚ್ಚಿನ ವಿವರ/ಸ್ಪಷ್ಟೀಕರಣಗಳು ಏನಾದರೂ ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯುವುದು.
2. ಗುತ್ತಿಗೆದಾರರು ಅವರು ಪ್ರಸ್ತುತ ಕೈಗೆತ್ತಿಕೊಂಡು ಪ್ರಗತಿಯಲ್ಲಿರುವ ಕಾಮಗಾರಿಯ ಮೊತ್ತದ ವಿವರಗಳನ್ನು ಹಾಗೂ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಪಟ್ಟ ಉದ್ಯೋಗದಾತ ಅಥವಾ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗಿಂತ ಮೇಲ್ಪಟ್ಟ ಅಥವಾ ಸಮಾನಾಂತರ ಅಧಿಕಾರಿಯಿಂದ ದೃಢೀಕರಿಸಿದ ಪ್ರತಿಯಲ್ಲಿ ಸಲ್ಲಿಸುವುದು.
3. ರೂ.100.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ಗುತ್ತಿಗೆ ಕೆಲಸದ ಶೇ.50ರಷ್ಟು ಮೊತ್ತದ ಇದೇ ರೀತಿಯ ಕನಿಷ್ಠ ಒಂದು ಕಾಮಗಾರಿಯನ್ನು ಪ್ರಮುಖ ಗುತ್ತಿಗೆದಾರರಾಗಿ ಸಮರ್ಪಕವಾಗಿ ನಿರ್ವಹಿಸಿರಬೇಕು.
4. ಇ.ಎಂ.ಡಿ.ಯನ್ನು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1)ನೇ ನಿಬಂಧನೆ 9.1 ರಲ್ಲಿ ಸೂಚಿಸಿರುವ ಯಾವುದಾದರು ಒಂದು ರೀತಿಯಲ್ಲಿ ಐ.ಎಫ್.ಟಿಯ ಕಾಲಂ 4 ರಲ್ಲಿ ಸದರಿ ಕಾಮಗಾರಿಗೆ ಸೂಚಿಸಿರುವ ಮೊತ್ತವನ್ನು ಸಲ್ಲಿಸುವುದು ಹಾಗೂ ಇ.ಎಂ.ಡಿಯ ಸಿಂಧುತ್ವವು ಟೆಂಡರ್ ಅವಧಿಯು ಪೂರ್ಣಗೊಂಡ ನಂತರ 45 ದಿನಗಳವರಗೆ ಸಿಂಧುವಾಗಿರಬೇಕು.
5. ಸಮರ್ಪಕವಾಗಿ ಇ.ಎಂ.ಡಿ. ಸಲ್ಲಿಸದ ಟೆಂಡರ್‌ಗಳನ್ನು ಹಾಗೂ ನಿಗದಿಪಡಿಸಿದ ಸಮಯದ ನಂತರ ಸಲ್ಲಿಸಲಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಗುತ್ತಿಗೆದಾರರು ಖಾಲಿ ಟೆಂಡರ್ ದಸ್ತಾವೇಜುಗಳನ್ನು ಪಡೆಯುವ ಸಂದರ್ಭದಲ್ಲಿ ಗುತ್ತಿಗೆದಾರರ ಮೂಲ ನೊಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

7. ಅರ್ಜಿ ಸಲ್ಲಿಸಬಯಸುವ ಗುತ್ತಿಗೆದಾರರು ಇತ್ತೀಚಿನ ಆದಾಯ ತೆರಿಗೆ / ಮಾರಾಟ ತೆರಿಗೆ ಚುಕ್ತಾ ಮಾಡಿರುವ ಬಗ್ಗೆ ಪ್ರಮಾಣ ಪತ್ರದ ಪ್ರತಿಯನ್ನು ಸರ್ಕಾರದ ಪತ್ರಾಂಕಿತ ಅಧಿಕಾರಿಯವರಿಂದ ದೃಢೀಕರಿಸಿ ಭರ್ತಿ ಮಾಡಿದ ಟೆಂಡರ್‌ನೊಂದಿಗೆ ಸಲ್ಲಿಸಬೇಕು.
8. ಈ ವಿಭಾಗ ಕಛೇರಿಯಲ್ಲಿ ಈ ಹಿಂದೆ ಸಕಾಲದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದ, ಗುತ್ತಿಗೆ ಕರಾರು ಮಾಡಿಕೊಳ್ಳದ ಮತ್ತು ಇತರ ಯಾವುದೇ ರೀತಿಯಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1/2) ನ ನಿಬಂಧನೆ 3.2 ರಂತೆ ಈ ವಿಭಾಗ ಅಥವಾ ಬೇರೆ ಯಾವುದೇ ವಿಭಾಗಗಳಲ್ಲಿ ಡಿಫಾಲ್ಟರ್ ಎಂದು ಗುರುತಿಸಲಾಗಿರುವ ಹಾಗೂ ನಿಬಂಧನೆ 25 ರಲ್ಲಿ ತಿಳಿಸಿರುವಂತೆ ಭ್ರಷ್ಟ ಅಥವಾ ಮೋಸದ ಕ್ರಮಗಳಲ್ಲಿ ಬಾಗಿಯಾಗಿರುವ ಗುತ್ತಿಗೆದಾರರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
9. ಈ ಕಛೇರಿಯಲ್ಲಿ ಟೆಂಡರ್ ಪುಸ್ತಕ ಪಡೆದ ಪ್ರತಿಯೊಬ್ಬ ಗುತ್ತಿಗೆದಾರನು ಕಡ್ಡಾಯವಾಗಿ ಟೆಂಡರ್ ಫಾರಂ ಸಲ್ಲಿಸಬೇಕು. ಇಲ್ಲವಾದಲ್ಲಿ ಅವರ ಟೆಂಡರುಗಳನ್ನು ಮುಂದಿನ ದಿನಗಳಲ್ಲಿ ಪರಿಗಣಿಸಲಾಗುವುದಿಲ್ಲ.
10. ಗುತ್ತಿಗೆದಾರರು ಖಾಲಿ ಟೆಂಡರ್ ಪುಸ್ತಕಗಳನ್ನು ಅಂಚೆ ಮೂಲಕ ಕೋರಿದಲ್ಲಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1) ನ ನಿಬಂಧನೆ 2 (ಐ.ಎಫ್.ಟಿ) ರಲ್ಲಿ ಸೂಚಿಸಿರುವ ಹೆಚ್ಚುವರಿ ಮೊತ್ತವನ್ನು ಪಾವತಿಸಿದ ನಂತರ ನೊಂದಾಯಿತ ಅಂಚೆ/ತ್ವರಿತ ಅಂಚೆ ಮೂಲಕ ರವಾನಿಸಲಾಗುವುದು. ಈ ಸಂದರ್ಭದಲ್ಲಿ ಟೆಂಡರ್ ಪುಸ್ತಕಗಳು ನಿಗದಿತ ಸಮಯದಲ್ಲಿ ಗುತ್ತಿಗೆದಾರರಿಗೆ ತಲುಪದಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು ಜವಾಬ್ದಾರರಾಗುವುದಿಲ್ಲ.
11. ನಿಬಂಧನೆಯುಕ್ತ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
12. ಜಂಟಿಯಾಗಿ ಸಲ್ಲಿಸುವ ಟೆಂಡರನ್ನು ಪರಿಗಣಿಸಲಾಗುವುದಿಲ್ಲ
13. ಗುತ್ತಿಗೆದಾರರ ಟೆಂಡರ್ ಒಪ್ಪಿಗೆಯಾಗಿರುವ ಕುರಿತು ಉದ್ಯೋಗದಾತ /ಕಾರ್ಯಪಾಲಕ ಅಭಿಯಂತರರಿಂದ ಪತ್ರ ಸ್ವೀಕೃತವಾದ 20 ದಿನಗಳ ಒಳಗಾಗಿ ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಮೊತ್ತದ ಶೇಕಡ 5 ರಷ್ಟನ್ನು ಭದ್ರತಾ ಠೇವಣಿಯಾಗಿ ಹಾಗೂ ಅಸಮಂಜಸ ದರಗಳನ್ನು ಸೂಚಿಸಿದಾಗ ವ್ಯತ್ಯಾಸದ ಮೊತ್ತಕ್ಕೆ ಹೆಚ್ಚುವರಿ ಭದ್ರತಾ ಠೇವಣಿಯನ್ನು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆಡಬ್ಲ್ಯು –1) ನ ನಿಬಂಧನೆ 24.1 (ಐ.ಟಿ.ಟಿ)ರಂತೆ ಎಲ್ಲಾ ಕಾಮಗಾರಿಗೆ ಪಾವತಿಸಬೇಕಾಗಿರುತ್ತದೆ.
14. ಯಾವುದೇ ಟೆಂಡರನ್ನು ಕಾರಣಗಳನ್ನು ನಮೂದಿಸದೆ ಅಂಗೀಕರಿಸಲು ಅಥವಾ ತಿರಸ್ಕರಿಸಲು ಕೆಳಕಾಣಿಸಿದ /ಸಂಬಂಧಪಟ್ಟ ಅಧಿಕಾರಿಗಳಿಗೆ ಪೂರ್ಣ ಸ್ವಾತಂತ್ರ್ಯವಿರುತ್ತದೆ.
15. ಕಾಮಗಾರಿಗೆ ಬೇಕಾಗುವ ಉಕ್ಕು, ಸಿಮೆಂಟು, ಪೈಪು ಮತ್ತು ಇತರೆ ಸಾಮಗ್ರಿ/ಯಂತ್ರೋಪಕರಣ ಮುಂತಾದ ಐ.ಎಸ್. ಗುಣಮಟ್ಟದ ಸಾಮಗ್ರಿಗಳನ್ನು ಅವುಗಳ ಗುಣಮಟ್ಟದ ಬಗ್ಗೆ ಪರಿಶೀಲಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಹಾಗೂ ಪ್ರಮಾಣ ಪತ್ರ ಪಡೆದು ಗುತ್ತಿಗೆದಾರರೇ ತಂದು ಉಪಯೋಗಿಸಿ ಕಾಮಗಾರಿ ನಿರ್ವಹಿಸತಕ್ಕದ್ದು.

**ಸೂಚನೆ: ಅಧಿಸೂಚಿಸಿದ ದಿನಾಂಕವು ರಜಾ ದಿನವಾಗಿದ್ದಲ್ಲಿ, ಮುಂದಿನ ಕೆಲಸದ ದಿನ ಮತ್ತು ಸಮಯ ಅನ್ವಯವಾಗುತ್ತದೆ.**
**ಅನುಬಂಧ : ಕಾಮಗಾರಿಗಳ ವಿವರ**

**ಕೆ. ರಾಜಶೇಖರ**
ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

**ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)**
**ಕಾರ್ಯಪಾಲಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು.**
**ಅಲ್ಪಾವಧಿ ಟೆಂಡರ್– ಐಟಂ ರೇಟ್**
**ಟೆಂಡರ್ ಪ್ರಕಟಣೆ ಸಂಖ್ಯೆ :14/2008–09, ದಿನಾಂಕ: 31–01–2009**

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಗುತ್ತಿಗೆ ಕೆಲಸದ ಮೊತ್ತ ರೂ. (ಲಕ್ಷಗಳಲ್ಲಿ) | ಮುಂಗಡ ಠೇವಣಿ (ರೂ. ಗಳಲ್ಲಿ) | ಗುತ್ತಿಗೆ ದಾಖಲು ಪತ್ರಗಳ ಬೆಲೆ (ರೂ. ಗಳಲ್ಲಿ, ತೆರಿಗೆ ಪ್ರತ್ಯೇಕ) | ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ (ಮಳೆಗಾಲ ಸೇರಿ) | ಗುತ್ತಿಗೆ ದಾಖಲು ಪತ್ರಗಳನ್ನು ವಿತರಿಸಲು (17.00 ಗಂಟೆಯ ವರೆಗೆ) | ಗುತ್ತಿಗೆ ದಾಖಲು ಸ್ವೀಕರಿಸಲು ಕೊನೆಯ ದಿನಾಂಕ: (16.00 ಗಂಟೆಯವರೆಗೆ) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ದೊಡ್ಡಬಳ್ಳಾಪುರ ತಾ: ಲಿಂಗನಹಳ್ಳಿ ಕೆರೆ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 9.9 | 25000 | 3000+ ವ್ಯಾಟ್ | 3 ತಿಂಗಳು | 24.2.2009 | 25.2.2009 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 2 | ದೊಡ್ಡಬಳ್ಳಾಪುರ ತಾ: ಬಿಡಿಗೆರೆ ಕೆರೆ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 14.99 | 37500 | 4000+ ವ್ಯಾಟ್ | 4 ತಿಂಗಳು | 24.2.2009 | 25.2.2009 |
| 3 | ದೊಡ್ಡಬಳ್ಳಾಪುರ ತಾ: ಮಾಚಗೊಂಡನಹಳ್ಳಿ ಕೆರೆ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 19.86 | 50000 | 4000+ ವ್ಯಾಟ್ | 4 ತಿಂಗಳು | 24.2.2009 | 25.2.2009 |
| 4 | ದೇವನಹಳ್ಳಿ ತಾ: ಚಿಕ್ಕ ಸಣ್ಣೇಬಂಡೆ ಅಮಾನಿ ಕೆರೆ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ ಹಾಗೂ ಫ್ಲಗ್ ಅಂಡ್ ರಾಡ್ ಒದಗಿಸುವುದು | 14.55 | 36500 | 4000+ ವ್ಯಾಟ್ | 4 ತಿಂಗಳು | 24.2.2009 | 25.2.2009 |
| 5 | ದೇವನಹಳ್ಳಿ ತಾ: ಚನ್ನರಾಯಪಟ್ಟಣ ಕೆರೆಯಲ್ಲಿ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 9.7 | 24500 | 3000+ ವ್ಯಾಟ್ | 3 ತಿಂಗಳು | 24.2.2009 | 25.2.2009 |
| 6 | ದೇವನಹಳ್ಳಿ ತಾ: ಬೆಟ್ಟಕೋಟೆ ಕೆರೆಯಲ್ಲಿ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 9.31 | 23500 | 3000+ ವ್ಯಾಟ್ | 3 ತಿಂಗಳು | 24.2.2009 | 25.2.2009 |
| 7 | ದೇವನಹಳ್ಳಿ ತಾ: ಬೂದಿಗೆರೆ ಕೆರೆಯಲ್ಲಿ ಹೂಳು ತೆಗೆಯುವುದು ಮತ್ತು ಅಭಿವೃದ್ಧಿ ಕಾಮಗಾರಿ | 9.69 | 24500 | 3000+ ವ್ಯಾಟ್ | 3 ತಿಂಗಳು | 24.2.2009 | 25.2.2009 |
| 8 | ಹೊಸಕೋಟೆ ತಾ: ದೊಡ್ಡಹುಲ್ಲೂರು ಅಮಾನಿ ಕೆರೆಯಲ್ಲಿ ಹೂಳು ತೆಗೆಯುವುದು, ಏರಿ ಮತ್ತು ಕಾಲುವೆ ಅಭಿವೃದ್ಧಿ ಕಾಮಗಾರಿ | 9.45 | 24000 | 3000+ ವ್ಯಾಟ್ | 3 ತಿಂಗಳು | 26.2.2009 | 27.2.2009 |
| 9 | ಹೊಸಕೋಟೆ ತಾ: ಅರೆಹಳ್ಳಿ ಕೆರೆಯಲ್ಲಿ ಹೂಳು ತೆಗೆಯುವುದು, ಏರಿ ಮತ್ತು ಕಾಲುವೆ ಅಭಿವೃದ್ಧಿ ಕಾಮಗಾರಿ | 9.22 | 23500 | 3000+ ವ್ಯಾಟ್ | 3 ತಿಂಗಳು | 26.2.2009 | 27.2.2009 |
| 10 | ಹೊಸಕೋಟೆ ತಾ:ಮೇಡಿಮಲ್ಲಸಂದ್ರ ಕೆರೆಯ ಏರಿ ಮತ್ತು ಕಾಲುವೆ ಅಭಿವೃದ್ಧಿ ಕಾಮಗಾರಿ | 19.42 | 49000 | 4000+ ವ್ಯಾಟ್ | 4 ತಿಂಗಳು | 26.2.2009 | 27.2.2009 |
| 11 | ಹೊಸಕೋಟೆ ತಾ:ಕೊಳತ್ತೂರು ಕೆರೆಯ ಏರಿ ಮತ್ತು ಕಾಲುವೆ ಅಭಿವೃದ್ಧಿ ಕಾಮಗಾರಿ | 14.19 | 35500 | 4000+ ವ್ಯಾಟ್ | 4 ತಿಂಗಳು | 26.2.2009 | 27.2.2009 |
| 12 | ಹೊಸಕೋಟೆ ತಾ:ಅಟ್ಟೂರು ಕೆರೆಯ ಅಂಗಳದಲ್ಲಿ ಹೂಳು ತೆಗೆಯುವುದು ಏರಿ ಮತ್ತು ಕಾಲುವೆ ಅಭಿವೃದ್ಧಿ ಕಾಮಗಾರಿ | 12.32 | 30500 | 4000+ ವ್ಯಾಟ್ | 4 ತಿಂಗಳು | 26.2.2009 | 27.2.2009 |
| 13 | ಹೊಸಕೋಟೆ ತಾ:ಹಸಿಗಾಲ ಕೆರೆಯ ಏರಿ ಮತ್ತು ಕಾಲುವೆ ಅಭಿವೃದ್ಧಿ | 9.21 | 23500 | 3000+ ವ್ಯಾಟ್ | 3 ತಿಂಗಳು | 26.2.2009 | 27.2.2009 |
| 14 | ರಾಮನಗರ ತಾ: ಕುಂಭಾಪುರದ (ವಿಭೂತಿ ಪುರ ಪಂಚಾಯತಿ) ಕೆರೆ ಅಭಿವೃದ್ಧಿ ಕಾಮಗಾರಿ | 8.66 | 22000 | 3000+ ವ್ಯಾಟ್ | 3 ತಿಂಗಳು | 26.2.2009 | 27.2.2009 |
| 15 | ರಾಮನಗರ ತಾ: ಕಾಡನಕುಪ್ಪೆ (ಬನ್ನಿಕುಪ್ಪೆ ಪಂಚಾಯಿತಿ) ಕೆರೆ ಅಭಿವೃದ್ಧಿ ಕಾಮಗಾರಿ | 8.56 | 21500 | 3000+ ವ್ಯಾಟ್ | 3 ತಿಂಗಳು | 26.2.2009 | 27.2.2009 |
| 16 | ರಾಮನಗರ ತಾ: ಕೈಲಾಂಚ ಹೋ: ಅವೇರಳ್ಳಿ ಕುಡಿ ಕೆರೆ ಅಭಿವೃದ್ಧಿ ಕಾಮಗಾರಿ | 13.88 | 35000 | 4000+ ವ್ಯಾಟ್ | 4 ತಿಂಗಳು | 26.2.2009 | 27.2.2009 |
| 17 | ಮಾಗಡಿ ತಾ:ಎಂ.ಜಿ.ಪಾಳ್ಯ ಕೆರೆ ಅಭಿವೃದ್ದಿ ಕಾಮಗಾರಿ | 14.56 | 36500 | 4000+ ವ್ಯಾಟ್ | 4 ತಿಂಗಳು | 26.2.2009 | 27.2.2009 |

ಕಾರ್ಯಪಾಲಕ ಅಭಿಯಂತರರು,

ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

**WATER RESOURCES DEPARTMENT (MINOR IRRIGATION)**
**OFFICE OF THE EXECUTIVE ENGINEER, M.I.DIVISION, BANGALORE**
**Standard Tender Document System–KW-1 (<20Lakhs)**
**(Item Rate Tender)**
**Short Term Tender Notification No.14/2008-09, Dated: 31st January 2009**

Sealed Tenders in duplicate set are invited on behalf of Governor of Karnataka by the undersigned for the following works sanctioned under head of account 4702 (Plan) from Civil contractors registered in KPWD or Department of Water Resources or Minor Irrigation Department as per Karnataka transparency in public procurement ordinance act 2000 and standard tender document.Sealed Filled in tenders will be received in this office upto 16.00 hrs. on the date indicated in the tender Document and will be opened on the same day at 16.30 hrs. In presence of the tenderers who wish to attend.

Tenderers are advised to note the minimum qualification criteria specified in clause 2 and 3 of ITT in Standard Tender document. Contractors can see the detailed project reports containing estimated quantities, quarry map, drawings etc., on all working days during the office hours of this office. Contractors can receive the blank tender document(s) as per the dates mentioned in the notification by producing the Original Registration Certificate and upon payment of the prescribed fee in the form of D.D or pay order drawn on any nationalized/Scheduled bank payable at Bangalore in favour of Executive Engineer, M.I.Division, Bangalore.

**Conditions:**

1. Tendering contractors are requested to go through the conditions, instructions contained in the Standard Tender document (KW 1 ) regarding tender capacity, EMD amount, its validity and the form in which it should be submitted, filling of tender forms and instructions to be followed in filling the same, date and time fixed for receiving and opening of tender, mistakes in tender and rectification of the same, action taken if the contractor became defaulter, security deposit/additional security amount for unbalanced tender etc., If any other detail/clarification is required, the same can be sought from the undersigned office on any working day during the office hours.
2. Contractor should enclose the statements showing the value of existing commitments and on-going works as well as stipulated period of completion remaining for each of the works duly countersigned by the employer in charge, not below the rank of Executive Engineer or equivalent.
3. Contractor should have satisfactorily completed as prime contractor at least one similar work to an extent of 50% of the cost of the work, for all works costing upto Rs.100 lakh.
4. E.M.D. shall be submitted in any one of the form specified in clause 9.1 of standard tender document as shown in column 4 of the table of IFT for the particular work and shall be valid for 45 days beyond the validity of the tender.
5. Tenders received without valid EMD and tenders received after the dead line for submission of tender will be rejected.
6. Contractors will have to produce the original registration certificate at the time of obtaining the blank Tender document.
7. Contractors will have to submit the latest income tax clearance certificate and sales tax clearance certificate duly certified by a gazetted officer along with the completed tender.
8. Tender of the contractors, who have not completed the work in time, not executed the agreement in time and identified as defaulter in any other cases in this division or in any divisions as per clause 3.2 of Standard Tender Document and for corrupt and fraudulent practices as mentioned in clause 25 of the standard tender document will not be accepted.
9. All Contractors who will receive tender booklet from this office should submit the tender. Otherwise which, their tender will not be considered in future.
10. Contractors requesting Blank tender forms through mail will be dispatched by registered/speed post on payment of an extra amount as mentioned in clause 2 of IFT in standard tender document and Executive Engineer is not responsible for the postal delay if any, in the delivery of the documents or non – receipt of the same.

11. Conditional tenders will not be accepted.
12. Tenders from Joint Ventures are not accepted
13. Successful tenderer shall deliver to the employer the security deposit in any of the forms specified in the standard tender document for an amount equivalent to 5% of the contract price plus additional security for unbalanced tenders in accordance with clause 24.1 of ITT for all works within 20 days of receipt of the letter of acceptance by the employer.
14. The undersigned reserves the right to accept or reject any or all tenders without assigning any reason.
15. Contractors should execute the work by procuring cement, steel, pipes and any other material/machineries of IS standard required for the work on their own and necessary test certificates should be produced & approval of the same to be obtained before use of the same.

**Encl: Details of works**

**Note: If the notified date becomes a Holiday, the next working day is applicable**.

**K.RAJASEKHARA**
Executive Engineer,
M.I.Division, Bangalore.

**WATER RESOURCES DEPARTMENT (MINOR IRRIGATION)**
**OFFICE OF THE EXECUTIVE ENGINEER, M.I.DIVISION, BANGALORE.**
**SHORT TERM TENDER - ITEM RATE**
**TENDER NOTIFICATION No. 14/2008-09 Dated: 31-01-2009**

| Sl No. | Name of Work | Amount put to tender Rs. in lakhs | E.M.D. in Rs. | Cost of tender documents in Rs. | Time for completion of work (including monsoon) | Issue of blank tender forms upto 17.00 hrs. | Last date for Receipt of completed tender forms upto 16.00hrs. |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | Impt. and desilting of Linganahalli Tank in Doddaballapur Tq. | 9.90 | 25000 | 3000+ VAT | 3 months | 24.2.09 | 25.2.2009 |
| 2 | Impt. and desilting of bidigere Tank in Doddaballapur Tq. | 14.99 | 37500 | 4000+VAT | 4 months | 24.2.09 | 25.2.2009 |
| 3 | Impt. and desilting of Machagondanahalli Tank in Doddaballapur Tq. | 19.86 | 50000 | 4000+VAT | 4 months | 24.2.09 | 25.2.2009 |
| 4 | Impt., desilting and providing and fixing plug rod to Chikkasannebande Amani Tank in Devanahalli Tq., | 14.55 | 36500 | 4000+ VAT | 4 months | 24.2.09 | 25.2.2009 |
| 5 | Improvements and desilting of Channarayapatna tank in Devanahalli Taluk | 9.7 | 24500 | 3000+ VAT | 3 months | 24.2.09 | 25.2.2009 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 6 | Impt., and desilting Bettakote Amani Tank in Devanahalli Tq., | 9.31 | 23500 | 3000+ VAT | 3 months | 24.2.09 | 25.2.2009 |
| 7 | Impt., and desilting Budigere Tank in Devanahalli Tq., | 9.69 | 24500 | 3000+ VAT | 3 months | 24.2.09 | 25.2.2009 |
| 8 | Impt., to bund, canal and desilting Doddahulluru Amani Tank in Hosakote Tq., | 9.45 | 24000 | 3000+ VAT | 3 months | 26.2.09 | 27.2.2009 |
| 9 | Impt., to bund, canal and desilting Arehalli Tank in Hosakote Tq., | 9.22 | 23500 | 3000+ VAT | 3 months | 26.2.09 | 27.2.2009 |
| 10 | Impt., to bund canal Medimallasandra Tank in Hosakote Tq., | 19.42 | 49000 | 4000+ VAT | 4 months | 26.2.09 | 27.2.2009 |
| 11 | Impt., to bund, canal Kolathuru Tank in Hosakote Tq., | 14.19 | 35500 | 4000+ VAT | 4 months | 26.2.09 | 27.2.2009 |
| 12 | Impt., to bund, canal and desilting in canal bed Atturu Tank in Hosakote Tq., | 12.32 | 30500 | 4000+ VAT | 4 months | 26.2.09 | 27.2.2009 |
| 13 | Impt., to bund, canal of Hasigala Tank in Hosakote Tq., | 9.21 | 23500 | 3000+ VAT | 3 months | 26.2.09 | 27.2.2009 |
| 14 | Impt., to Kumbapura (Vibhutipura Panchayati) Tank in Ramanagara Tq., | 8.66 | 22000 | 3000+ VAT | 3 months | 26.2.09 | 27.2.2009 |
| 15 | Impt., to Kadanakuppe (Bannikuppe Panchayati) Tank in Ramanagara Tq., | 8.56 | 21500 | 3000+ VAT | 3 months | 26.2.09 | 27.2.2009 |
| 16 | Impt., to Averalli Kudi Tank in Kailancha Hobli in Ramanagara Tq., | 13.88 | 35000 | 4000+VAT | 4 months | 26.2.09 | 27.2.2009 |
| 17 | Impt., to M.G.palya Tank in Magadi, taluk | 14.56 | 36500 | 4000+VAT | 4 months | 26.2.09 | 27.2.2009 |

Executive Engineer,
M.I.Division, Bangalore.

P.R. 170

**ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು**

**ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ ಸಂಖ್ಯೆ : 50/2008-09, ದಿನಾಂಕ: 13ನೇ ಫೆಬ್ರವರಿ 2009**

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ವಿಭಾಗದ ಕಾರ್ಯಪಾಲಕ ಅಭಿಯಂತರವರಿಂದ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಅಲ್ಪಾವಧಿ ಐಟಂವಾರು ಟೆಂಡರುಗಳನ್ನು **"ದ್ವಿ ಲಕೋಟೆ"** ಪದ್ಧತಿಯಲ್ಲಿ ಎರಡು ಮೊಹರ್‌ಗಳಾದ **"ಟೆಕ್ನಿಕಲ್ ಬಿಡ್"** ಮತ್ತು **ಫೈನ್ಯಾನ್ಷಿಯಲ್ ಬಿಡ್"** ಗಳನ್ನು ನಿಗಧಿತ ನಮೂನೆಯ ದ್ವಿಪ್ರತಿಗಳಲ್ಲಿ ಮೊಹರಾದ ಲಕೋಟೆಯ ಮೇಲೆ ಕೆಲಸದ ಹೆಸರನ್ನು ನಮೂದಿಸಲಾದ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯ **ಸ್ಟಾಂಡರ್ ಟೆಂಡರ್**

**ಡಾಕ್ಯೂಮೆಂಟ್‌ರಲ್ಲಿನ K/w-4ರಲ್ಲಿನ** ಷರತ್ತುಗಳಿಗೆ ಅನುಗುಣವಾಗಿ ಹಾಗೂ ಸರ್ಕಾರಿ ಪ್ರಕಟಣೆ ಪಿ.ಡಬ್ಲ್ಯು.ಡಿ.154.ಎಫ್.ಸಿ 11–2000–ಪಾರದರ್ಶಕತೆ ಆಧ್ಯಾದೇಶ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ರೂಲ್ಸ್ 2000 ಅನುಗುಣವಾಗಿ ಕಾಮಗಾರಿಗಳ ಎದುರಿಗೆ ನಮೂದಿಸಿರುವ ದಿನಾಂಕದಂದು 16.00 ಗಂಟೆಯವರೆಗೆ ಸ್ವೀಕರಿಸಲಾಗುತ್ತದೆ ಮತ್ತು ಅವುಗಳನ್ನು ಸಾಧ್ಯವಾದಲ್ಲಿ ಅದೇ ದಿವಸ 16.30 ಗಂಟೆಗೆ ತೆರೆಯಲಾಗುವುದು. **ನಿಗಧಿಪಡಿಸಿದ ಇ.ಎಂ.ಡಿ. ಮೊತ್ತವನ್ನು ಕಾರ್ಯಪಾಲಕ ಅಭಿಯಂತರವರ ಹೆಸರಿಗೆ ಒತ್ತೆಯಾಗಿ ಇಡಬೇಕು, ಇಲ್ಲದಿದ್ದಲ್ಲಿ ಅಂತಹ ಟೆಂಡರನ್ನು ತಿರಸ್ಕರಿಸಲಾಗುವುದು.**

ಈ ಕೆಳಕಂಡ ಮಾಹಿತಿಗಳು ಮೊಹರ್‌ಪಡಿಸಲಾದ "ಟೆಕ್ನಿಕಲ್ ಬಿಡ್" ನಲ್ಲಿ (ಕವರ್–1) ಹೊಂದಿರಬೇಕು.

1. ಗುತ್ತಿಗೆದಾರರು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಸೆಕ್ಷನ್ 3ರಲ್ಲಿ ಕೋರಿರುವ ಎಲ್ಲಾ ಮಾಹಿತಿಗಳನ್ನು ನೀಡಿರುವ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
2. ಕಳೆದ ಐದು ವರ್ಷದ ಅವಧಿಯಲ್ಲಿ ಗುತ್ತಿಗೆದಾರರು:
   ಎ) ಯಾವುದೇ 2 ಆರ್ಥಿಕ ವರ್ಷಗಳಲ್ಲಿ ಟೆಂಡರ್‌ಗಿಟ್ಟ ಮೊತ್ತದ ಕನಿಷ್ಠ ಶೇ. 200 ರಷ್ಟು ಮೊತ್ತದ ರಸ್ತೆ ಕಾಮಗಾರಿಗಳನ್ನು ನಿರ್ವಹಿಸಿರತಕ್ಕದ್ದು.
   ಬಿ) ಯಾವುದೇ 1 ಆರ್ಥಿಕ ವರ್ಷದಲ್ಲಿ ಟೆಂಡರ್‌ಗಿಟ್ಟ ಮೊತ್ತದಷ್ಟು ಶೇ. 80 ರಷ್ಟು ಕಡಿಮೆ ಇರದ 1 ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರತಕ್ಕದ್ದು.
3. ಭಾಗ 3 ರಲ್ಲಿ ಕೋರಿರುವ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ನೀಡತಕ್ಕದ್ದು ಮತ್ತು ಸದರಿ ದೃಢೀಕರಣವನ್ನು ಕಾರ್ಯಪಾಲಕ ಇಂಜಿನಿಯರ್‌ರವರ ಹುದ್ದೆಗೆ ಸಮಾನಂತರವಾದ ಅಥವಾ ಹೆಚ್ಚಿನ ಹುದ್ದೆಯುಳ್ಳ ಅಧಿಕಾರಿಗಳಿಂದ ದೃಢೀಕರಿಸತಕ್ಕದ್ದು.
4. ಟೆಂಡರು ಸಲ್ಲಿಸುವ ಗುತ್ತಿಗೆದಾರರು ಡಾಂಬರೀಕರಣ ಮಾಡಲು ಈ ಕೆಳಗೆ ನಿಗಧಿಪಡಿಸಿರುವಂತಹ ಯಂತ್ರೋಪಕರಣಗಳನ್ನು ಕನಿಷ್ಠವಾಗಿ ಸ್ವಂತಕ್ಕೆ ಹೊಂದಿರುವ ಯಂತ್ರೋಪಕರಣ ವಿವರ
   (1) 40/60 ಟಿ.ಪಿ.ಹೆಚ್ ಸಾಮರ್ಥ್ಯಕ್ಕೆ ಕಡಿಮೆಯಿರದ ಹೆಚ್.ಎಂ.ಪಿ – 1 ಸಂಖ್ಯೆ, (2) ಮೆಕ್ಯಾನಿಕಲ್ ಪೇವರ್ ಫಿನಿಷರ್ – 1 ಸಂಖ್ಯೆ, (3) ವೈಬ್ರೇಟರಿ ರೋಲರ್ – 1 ಸಂಖ್ಯೆ (4) ಟಿಪ್ಪರ್ – 1 ಸಂಖ್ಯೆ (5) ಮೆಕ್ಯಾನಿಕಲ್ ಸ್ಪ್ರೇಯರ್ – 1 ಸಂಖ್ಯೆ, ಇವುಗಳ ಬಗ್ಗೆ ಸೂಕ್ತ ದಾಖಲಾತಿಗಳನ್ನು ಟೆಂಡರಿನೊಂದಿಗೆ ಲಗತ್ತಿಸಬೇಕು.
5. ಯಂತ್ರೋಪಕರಣವನ್ನು ಬೇರೆಯವರಿಂದ ಬಾಡಿಗೆ/ಲೀಸ್ ಆಧಾರದ ಮೇಲೆ ಪಡೆಯುವ ಯಂತ್ರೋಪಕರಣದ ವಿವರ
   (1) ಟಿಪ್ಪರ್ – 2 ಸಂಖ್ಯೆ (2) ವೈಬ್ರೇಟರಿ ರೋಲರ್ – 1 ಸಂಖ್ಯೆ, (3) ಏರ್ ಕಂಪ್ರೈಸರ್ –1 ಸಂಖ್ಯೆ (4) ಏರ್ ಬ್ಲೋವರ್ – 1 ಸಂಖ್ಯೆ, ಇವುಗಳ ಬಗ್ಗೆ ಮಾಲೀಕರಿಂದ ಒಪ್ಪಿಗೆ ಪತ್ರ ಹಾಗೂ ಅವರ ಬಳಿ ಇರುವ ಯಂತ್ರೋಪಕರಣಗಳ ಮಾಲೀಕತ್ವದ ವಿವರಗಳನ್ನೊಳಗೊಂಡ ಧೃಡೀಕೃತ ದಾಖಲೆಗಳನ್ನು ಪಡೆದು ಲಗತ್ತಿಸಿರಬೇಕು.
6. ಹಾಲಿ ನಿರ್ವಹಿಸುತ್ತಿರುವ ಹಾಗೂ ನಿರ್ವಹಿಸುತ್ತಿರುವ ಟೆಂಡರ್ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟವರಿಂದ ಖಡ್ಡಾಯವಾಗಿ ನಿಗಧಿತ ನಮೂನೆಯಲ್ಲಿಯೇ ಧೃಢೀಕರಿಸಿ ಲಗತ್ತಿಸಿರಬೇಕು.
7. ಸಂಬಂಧಪಟ್ಟ ಎಲ್ಲಾ ಮೂಲ ದಸ್ತಾವೇಜುಗಳನ್ನು ತಾಂತ್ರಿಕ ಬಿಡ್ ತೆರೆಯುವ ಸಮಯದಲ್ಲಿ ಖಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
8. ಕಾಮಗಾರಿಯನ್ನು ನಿರ್ವಹಿಸಲು ಆರ್ಥಿಕವಾಗಿ ಸಾಮರ್ಥ್ಯವಾಗಿರುವ ಬಗ್ಗೆ ದೃಢೀಕರಣ ಪತ್ರ ಲಗತ್ತಿಸಿರಬೇಕು. ಹಾಗೂ ಬ್ಯಾಂಕಿನಿಂದ ಲೈನ್ ಆಫ್ ಕ್ರೆಡಿಟ್ (ಟೆಂಡರಿಗಿಟ್ಟಿರುವ ಮೊತ್ತದ ಶೇಖಡಾ 30 ರಷ್ಟಕ್ಕೆ) ಪತ್ರವನ್ನು ಟೆಕ್ನಿಕಲ್ ಬಿಡ್ ದಾಖಲಾತಿಯೊಂದಿಗೆ ಒದಗಿಸಿರುವ ನಮೂನೆಯಲ್ಲಿಯೇ ಪಡೆದು ಲಗತ್ತಿಸಬೇಕು.
9. ಸರ್ಕಾರದ ಆದೇಶ ಸಂಖ್ಯೆ ಎಲ್‌ಡಿ: 300: ಎಲ್‌ಇಟಿ: 2006 ದಿ. 18.10.2007 ರಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996ರ ಅನ್ವಯ ಗುತ್ತಿಗೆದಾರರಿಗೆ ಸಂದಾಯ ಮಾಡಬೇಕಾದ ಮೊತ್ತಗಳ ಶೇಖಡಾ 1 ರಷ್ಟನ್ನು ಪ್ರತಿ ಬಿಲ್ಲುಗಳಲ್ಲಿ ಖಡ್ಡಾಯವಾಗಿ ಕಡಿತಗೊಳಿಸಲಾಗುವುದು.

**"ಫೈನ್ಯಾನ್ಷಿಯಲ್ ಬಿಡ್" ನಲ್ಲಿ (ಕವರ್–2) ಈ ಕೆಳಕಂಡ ವಿವರಗಳನ್ನು ಲಗತ್ತಿಸಬೇಕು :**

1. ಷೆಡ್ಯೂಲ್ "ಬಿ" ದ್ವಿಪ್ರತಿಯಲ್ಲಿ ಅಂಕಿ ಮತ್ತು ಅಕ್ಷರಗಳೆರಡರಲ್ಲೂ ದರಗಳನ್ನು ನಮೂದಿಸಿ ತಿದ್ದುಪಡಿ ಮಾಡಿರುವುದನ್ನು ಸಹಿಯೊಂದಿಗೆ ದೃಢೀಕರಿಸಬೇಕು.
2. ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ರಲ್ಲಿನ ಇವುಗಳನ್ನು ಹಾಗೂ ಇದರ ಅಡಕಗಳನ್ನು ಪೂರ್ಣ ರೀತಿಯಲ್ಲಿ ಭರ್ತಿಮಾಡಿ ಸಹಿಮಾಡಿ ಸಲ್ಲಿಸಬೇಕು.

ಟೆಂಡರನ್ನು ಮೊದಲು **"ಟೆಕ್ನಿಕಲ್ ಬಿಡ್"** ಕವರನ್ನು ತೆಗೆದು ಪರಿಶೀಲಿಸಲಾಗುವುದು. ನಿಬಂಧನೆಗಳಂತೆ ತೃಪ್ತಿಕರವಾಗಿಲ್ಲದ ಪಕ್ಷದಲ್ಲಿ **"ಫೈನ್ಯಾನ್ಷಿಯಲ್ ಬಿಡ್"** ಕವರನ್ನು ತೆರೆಯದೆ ರದ್ದುಪಡಿಸಲಾಗುವುದು. ತೃಪ್ತಿಕರ ಎಂದು ಕಂಡು ಬಂದಲ್ಲಿ ಫೈನ್ಯಾನ್ಷಿಯಲ್ ಬಿಡ್ ಕವರನ್ನು ತೆರೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಟೆಂಡರ್ ದಾಖಲಾತಿಗಳನ್ನು ಪಡೆಯಲು ಗುತ್ತಿಗೆದಾರರಿಂದ ಅರ್ಜಿಯನ್ನು ನಿಗದಿಪಡಿಸಿದ ಶುಲ್ಕದೊಡನೆ (ಹಿಂದಿರುಗಿಸಲಾಗುವುದಿಲ್ಲ) ಕೆಳಗೆ ನಮೂದಿಸಿರುವ ದಿನಾಂಕದವರೆವಿಗೂ ಸ್ವೀಕರಿಸಲಾಗುತ್ತದೆ. ಟೆಂಡರ್ ನಮೂನೆಯನ್ನು ಅಂಚೆ ಮೂಲಕ ಪಡೆಯಲು ಅಪೇಕ್ಷಿಸಿದಲ್ಲಿ ಅಂಚೆ ವೆಚ್ಚ ರೂ. 500.00 ಗಳನ್ನು ಟೆಂಡರ್ ಫಾರಂ ಬೆಲೆಯೊಡನೆ ಹೆಚ್ಚುವರಿಯಾಗಿ ಅರ್ಜಿಯೊಡನೆ ನಿಗದಿಪಡಿಸಿದ ದಿನಾಂಕದ ಒಂದು ವಾರಕ್ಕೆ ಮೊದಲಾಗಿ ಸಲ್ಲಿಸಬೇಕು. ಅಂಚೆ ವಿಳಂಬಕ್ಕೆ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.

ತಾಂತ್ರಿಕ ಬಿಡ್‌ನೊಂದಿಗೆ ನಿಗದಿತ ಇ.ಎಂ.ಡಿ.ಯನ್ನು ಎನ್.ಎಸ್.ಸಿ/ಡಿ.ಡಿ/ಬ್ಯಾಂಕರ್ಸ್ ಚೆಕ್ ರೂಪದಲ್ಲಿ ಕಾರ್ಯಪಾಲಕ ಅಭಿಯಂತರವರು, ಮೈಸೂರು ವಿಭಾಗ, ಮೈಸೂರು ಇವರ ಹೆಸರಿನಲ್ಲಿ ಒತ್ತೆಮಾಡಿ ಸಲ್ಲಿಸಬೇಕು. ಯಾವುದಾದರೂ ಅಥವಾ ಎಲ್ಲಾ ಟೆಂಡರುಗಳನ್ನು ಯಾವ ಕಾರಣವನ್ನು ನೀಡದೆ ತಿರಸ್ಕರಿಸುವ ಹಕ್ಕು ಟೆಂಡರ್ ಸ್ವೀಕರಿಸುವ ಅಧಿಕಾರಿಗಳಿಗೆ ಸೇರಿರುತ್ತದೆ. ಹೆಚ್ಚಿನ ವಿವರಗಳೇನಾದರೂ ಬೇಕಿದ್ದಲ್ಲಿ ಕಾರ್ಯಪಾಲಕ ಅಭಿಯಂತರು, ಮೈಸೂರು ವಿಭಾಗ, ಮೈಸೂರು ಇವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಕಾಮಗಾರಿಯ ಮೊಬಲಗು ಲಕ್ಷ ರೂ.ಗಳಲ್ಲಿ | ಇ.ಎಂ.ಡಿ. ಲಕ್ಷ ರೂ.ಗಳಲ್ಲಿ | ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ (ಹಿಂತಿರುಗಿಸ ಲಾಗುವುದಿಲ್ಲ) | ಗುತ್ತಿಗೆದಾರರ ದರ್ಜೆ | ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಮಿತಿ | ಕಡೆಯ ದಿನಾಂಕ | | |
|---|---|---|---|---|---|---|---|---|---|
| | | | | | | | ಗುತ್ತಿಗೆದಾರರಿಂದ ಅರ್ಜಿ ಸ್ವೀಕರಿಸಲು | ಖಾಲಿ ಟೆಂಡರ್ ದಾಖಲಾತಿ ಗಳನ್ನು ನೀಡುವ ದಿನಾಂಕ | ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸ್ವೀಕರಿಸುವ ದಿನಾಂಕ |
| 1 | ಮೈಸೂರು ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ ಸಂ. 212ರ ಸ. 220.40 ಕಿ.ಮಿ. ನಿಂದ ವರುಣಾ–ಹೊಸಕೋಟೆ–ಸುತ್ತೂರು ಮುಖಾಂತರ ಶಿರಾ–ನಂಜನಗೂಡು ರಸ್ತೆಗೆ ಸೇರುವ ರಸ್ತೆ (ರಾಜ್ಯ ಹೆದ್ದಾರಿ ಸಂ.84) ಯ ಸ. 0.00 ರಿಂದ 6.40 ಕಿ.ಮಿ. ವರೆಗಿನ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ | 135.00 | 2.02 | 5000 + ಶೇ.10 ತೆರಿಗೆ | 1ನೇ ದರ್ಜೆ ಗುತ್ತಿಗೆ ದಾರರು | 9 ತಿಂಗಳು (ಮಳೆಗಾಲ ಹೊರತು ಪಡಿಸಿ) | 24.02.2009 | 26.02.2009 | 28.02.2009 |

ಕಾರ್ಯಪಾಲಕ ಅಭಿಯಂತರರು
ಲೋ. ಬಂ ಮತ್ತು ಒ. ಜ. ಸಾರಿಗೆ ಇಲಾಖೆ,
ಮೈಸೂರು ವಿಭಾಗ, ಮೈಸೂರು.

## ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
## "ಟೆಂಡರ್ ಅವಧಿ ವಿಸ್ತರಣೆ"

**ವಿಷಯ:** ಈ ಕಛೇರಿಯಿಂದ ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಕಾಲ ವಿಸ್ತರಣೆ ಬಗ್ಗೆ.

**ಉಲ್ಲೇಖ:** 1.ಈ ಕಛೇರಿಯ ಐಟಂವಾರು ಟೆಂಡರ್ ಪ್ರಕಟಣೆ ಸಂ. 33/2008–09, ದಿನಾಂಕ: 31.12.2008.

ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ಆಹ್ವಾನಿಸಲಾಗಿದ್ದ ಈ ಕಛೇರಿಯ ಐಟಂವಾರು ಟೆಂಡರು ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಈ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 19.02.2009 ರಿಂದ 23.02.2009 ರವರೆಗೆ ಈ ಕೆಳಕಂಡ ಕಾಮಗಾರಿಗಳ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

1. ಶ್ರೀರಂಗಪಟ್ಟಣ ಮಲೈಮಹದೇಶ್ವರ ರಾಜ್ಯ ಹೆದ್ದಾರಿ 79 ಸ.24.30 ರಿಂದ 48.30 ಕಿ.ಮಿವರೆಗೆ ರಸ್ತೆ ಅಭಿವೃದ್ಧಿ (ಶ್ರೀರಂಗಪಟ್ಟಣದಿಂದ ಬನ್ನೂರು, ಸೋಸಲೆ ಟಿ. ನರಸೀಪುರ, ಮಾದಾಪುರ ಕಲಿಯೂರು ಮತ್ತು ಕೊಳ್ಳೇಗಾಲದವರೆಗೆ) ಆಯ್ದಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ.
2. ಮಾದಾಪುರ–ತಲಕಾಡು–ಸರಗೂರು ಹ್ಯಾಂಡ್ ಪೋಸ್ಟ್‌ವರೆಗೆ ಸ.0.00 ರಿಂದ 16.60 ಕಿ.ಮಿ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ.

ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಮತ್ತು ಒ. ಜ. ಸಾರಿಗೆ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಪಿ.ಆರ್. 181